**ಒ.ಎಸ್.ನಂ. 321 /2014**

**ಡಿ. ಡಬ್ಲ್ಯೂ-1**

**ದಿನಾಂಕಃ 15.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ವಾದಿ ಪರ ಶ್ರೀ ಎ ಟಿ ಕೆ ವಕೀಲರಿಂದಃ-**

ನಾನು ಮತ್ತು ವಾದಿ ಬೇರೆ ಬೇರೆ ಊರಿನವರು. ವಾದಿ ಶಿಂಡೇನಹಳ್ಳಿ ಗ್ರಾಮದವರು ಮತ್ತು ನಾನು ಗೊಲ್ಲನ ಬೀಡು ಗ್ರಾಮದಲ್ಲಿ ವಾಸವಿರುತ್ತೇನೆ. ನಮ್ಮೂರಿನಿಂದ ಶಿಂಡೇನಹಳ್ಳಿಗೆ 1 ವರೆ ಕಿಲೋ ಮೀಟರ್ ಅಂತರವಿರುತ್ತದೆ. ವಾದಿ ಇರುವ ಮನೆಗೂ ಮತ್ತು ದಾವಾ ಸ್ವತ್ತಿಗೂ ಎಷ್ಟು ದೂರ ಅಂತರ ಇರುತ್ತದೆ ಎಂದರೆ ದಾವಾ ಸ್ವತ್ತಿನಲ್ಲೇ ಮನೆ ಕಟ್ಟಿಕೊಟ್ಟಿಕೊಂಡು ಇರುತ್ತಾರೆ ಎಂದು ನುಡಿಯುತ್ತಾರೆ. ವಾದಿ ಸರ್ವೆ ನಂಬರ್ 5 ಕ್ಕೆ ಸಂಬಂಧಿದಂತೆ ದಾವೆ ಹೂಡಿರುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂಧಿ ಗೊತ್ತು ಮತ್ತು ದಾವಾ ಸ್ವತ್ತನ್ನು ನೋಡಿರುತ್ತೇನೆ. ದಾವಾ ಸ್ವತ್ತು ಯಾರಿಗೆ ಯಾವಾಗ ಮಂಜೂರಾಗಿರುತ್ತದೆ ಎಂದರೆ ನನ್ನ ತಾತ ಕರೀಗೌಡ ಎಂಬುವರಿಗೆ 1975-76 ನೇ ಸಾಲಿನಲ್ಲಿ ಮಂಜುರಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 5 ರಲ್ಲಿ 3 ಎಕರೆ ಜಮೀನು ನನ್ನ ತಾತನಿಗೆ ಮಂಜೂರಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ಸದರಿ ಸ್ವತ್ತು ನನ್ನ ತಾತನಿಗೆ ಯಾವತ್ತು ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ವಾದಿ ಸಹೋದರರು ಮತ್ತು ತಾಯಿ ಬಗ್ಗೆ ಗೊತ್ತಿಲ್ಲ. ಸರ್ವೆ ನಂಬರ್ 5 ರ 3 ಎಕರೆ ಜಮೀನು ಪ್ರಸ್ತುತ ಪಹಣಿ ವಾದಿಯ ಹೆಸರಿನಲ್ಲಿರುತ್ತದೆ. ಎಷ್ಟು ವರ್ಷಗಳಿಂದ ವಾದಿ ಹೆಸರಿನಲ್ಲಿ ಪಹಣಿ ನಮೂದಾಗಿದೆ ಎಂದು ಗೊತ್ತಿಲ್ಲ. ವಾದಿ ತಾಯಿ ಜವರಮ್ಮ ನವರ ಹೆಸರಿನಲ್ಲಿ ಪಹಣಿ ನಮೂದಾಗಿರುವುದನ್ನು ನಾನು ನೋಡಿರುವುದಿಲ್ಲ. ವಾದಿ ಯಾವ ದಾಖಲೆ ಹಾಜರುಪಡಿಸಿದ್ದಾರೆ ಎಂದು ತಿಳಿದುಕೊಂಡಿರುವುದಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯವಾಕಾಶ ಕೋರಿದ್ದು, ರೂ.100/- ವೆಚ್ಚದೊಂದಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**